ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ವಿಶೇಷ ರಾಜ್ಯ ಪತ್ರಿಕೆ

ಭಾಗ – ೧ Part – I	ಬೆಂಗಳೂರು, ಶನಿವಾರ, ೩೦, ಏಪ್ರಿಲ್, ೨೦೨೨(ವೈಶಾಖ,೧೦, ಶಕವರ್ಷ, ೧೯೪೪) BENGALURU, SATURDAY, 30, APRIL, 2022 (VAISHAKHA, 10, SHAKAVARSHA, 1944)	ಸಂ. ೨೫೪ No. 254

ಕರ್ನಾಟಕ ಸರ್ಕಾರ

ಸಂಖ್ಯೆ: ಸಿಆಸುಇ 12 ಸೇಅನೇ 2022

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಧಾನಸೌಧ,
ಬೆಂಗಳೂರು, ದಿನಾಂಕ: 30.04.2022.

ಸುತ್ತೋಲೆ

ವಿಷಯ: ಅನುಕಂಪದ ಆಧಾರದ ಮೇಲೆ ನೇಮಕಾತಿ ಕುರಿತು ಸ್ಪಷ್ಟೀಕರಣ.

****

ಕರ್ನಾಟಕ ಸಿವಿಲ್ ಸೇವಾ (ಅನುಕಂಪದ ಆಧಾರದ ಮೇಲೆ ನೇಮಕಾತಿ) ನಿಯಮಗಳು, 1996ರನ್ವಯ ಸರ್ಕಾರಿ ನೌಕರರು ಸೇವೆಯಲ್ಲಿರುವಾಗಲೇ ಮೃತಪಟ್ಟಲ್ಲಿ ಅವರ ಅವಲಂಬಿತರಲ್ಲಿ ಅರ್ಹರಾದ ಒಬ್ಬರಿಗೆ, ನಿಯಮಗಳಲ್ಲಿ ನಿಗದಿಪಡಿಸಿರುವ ಷರತ್ತು ಮತ್ತು ನಿಬಂಧನೆಗಳನ್ನು ಪೂರೈಸುವ ಷರತ್ತಿಗೊಳಪಟ್ಟು ಅನುಕಂಪದ ಆಧಾರದ ನೇಮಕಾತಿಯನ್ನು ನೀಡಬಹುದಾಗಿದೆ. ಈ ನಿಯಮಗಳ ನಿಯಮ 3 ರಲ್ಲಿ ಅನುಕಂಪದ ಆಧಾರದ ನೇಮಕಾತಿಗೆ ಅರ್ಹತೆಯನ್ನು ಹಾಗೂ ನಿಯಮ 2 ರಲ್ಲಿ 'ಕುಟುಂಬ' ಪದದ ಅರ್ಥವನ್ನು ವ್ಯಾಖ್ಯಾನಿಸಲಾಗಿದೆ. ಈ ನಿಯಮಗಳನ್ವಯ ಅನುಕಂಪದ ಆಧಾರದ ನೇಮಕಾತಿಯನ್ನು ಸಂದರ್ಭಾನುಸಾರ ಪತ್ನಿ/ಪತಿ, ಮಗ ಅಥವಾ ಮಗಳು ಪಡೆಯಬಹುದಾಗಿರುತ್ತದೆ.

ಭಾರತದ ಸರ್ವೋಚ್ಚ ನ್ಯಾಯಾಲಯವು CIVIL APPEAL NO: 1620/2022 (arising out of SLP(C) No: 18571/2018)ರಲ್ಲಿ ದಿನಾಂಕ: 24.02.2022 ರಂದು ಆದೇಶ ನೀಡುತ್ತಾ ಉಲ್ಲೇಖಿಸಿರುವ ದೆಹಲಿ ಉಚ್ಚ ನ್ಯಾಯಾಲಯದ Union of India v. Pankaj Kumar Sharma ಪ್ರಕರಣದ ತೀರ್ಪಿನ ಉದ್ಧೃತ ಭಾಗ ಈ ಕೆಳಕಂಡಂತಿದೆ:-

> "22. The Court is of opinion that – apart from being textually sounds – understanding 'descent' in terms of prohibiting discrimination against a person on the basis of legitimacy, or on the basis of his mother's status as a first or second wife, fits within the principles underlying Article 16(2). Not only is one's descent, in this sense, entirely beyond one's control (and therefore, ought not to become a ground of State-sanctioned disadvantage), but it is also an established fact that children of 'seconds' wives, whether counted as illegitimate or legitimate, have often suffered severe social disadvantage. Another significant observation here is that at the entry level – "legitimacy" is and cannot be a ground for denial of

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment WPP No. 297

public employment. For these reasons, this Court is of the opinion that the Petitioner's regulation violates Article 16(2)".

ಇದೇ ಪ್ರಕರಣದಲ್ಲಿ ಉಲ್ಲೇಖಿಸಿರುವ ಮಾನ್ಯ ಸರ್ವೋಚ್ಚ ನ್ಯಾಯಾಲಯದ V.R.Tripathi ಪ್ರಕರಣದ ತೀರ್ಪಿನ ಉದ್ಧೃತ ಭಾಗ ಈ ಕೆಳಕಂಡಂತಿದೆ:-

"17..... We are here concerned with the exclusion of children born from a second marriage. By excluding a class of beneficiaries who have been deemed legitimate by the operation of law, the condition imposed is disproportionate to the object sought to be achieved. Having regard to the purpose and object of a scheme of compassionate appointment,

once the law has treated such children as legitimate, it would be impermissible to exclude them from being considered for compassionate appointment. Children do not choose their parents. To deny compassionate appointment though the law treats a child of a void marriage as legitimate is deeply offensive to their dignity and is offensive to the constitutional guarantee against discrimination."

ಮೇಲೆ ತಿಳಿಸಲಾದ ತೀರ್ಪುಗಳಲ್ಲಿ, ಸರ್ಕಾರಿ ನೌಕರನ ಎರಡನೇ ಪತ್ನಿಯಿಂದ ಜನಿಸಿದ ಮಕ್ಕಳು ಅನ್ನುವ ಕಾರಣಕ್ಕಾಗಿ, ಮಕ್ಕಳಲ್ಲಿ ತಾರತಮ್ಯ ಮಾಡುವುದು ಭಾರತ ಸಂವಿಧಾನದ ಅನುಚ್ಛೇದ 16(2)ರ ಉಲ್ಲಂಘನೆಯಾಗುವುದರಿಂದಾಗಿ, ಎರಡನೇ ಪತ್ನಿಗೆ ಜನಿಸಿದ ಮಕ್ಕಳನ್ನು ಅನುಕಂಪದ ಆಧಾರದ ನೇಮಕಾತಿಗೆ ಪರಿಗಣಿಸದಿರುವುದು ಸೂಕ್ತವಲ್ಲವೆಂದು ಅವಲೋಕನೆ ಮಾಡಲಾಗಿರುತ್ತದೆ.

ಸರ್ಕಾರಿ ನೌಕರನ ಕಾನೂನುಬಾಹಿರ ಎರಡನೇ ಪತ್ನಿಯಿಂದ ಜನಿಸಿದ ಮಕ್ಕಳಿಗೆ ಅನುಕಂಪದ ಆಧಾರದ ನೇಮಕಾತಿ ನೀಡುವ ಪ್ರಕರಣಗಳನ್ನು ನಿರ್ವಹಿಸುವ ಬಗ್ಗೆ ಇತ್ತೀಚೆಗೆ ಹಲವು ಇಲಾಖೆಗಳು ಅಭಿಪ್ರಾಯ/ಸ್ಪಷ್ಟೀಕರಣ ಕೋರುತ್ತಿವೆ.

ಮಾನ್ಯ ನ್ಯಾಯಾಲಯಗಳ ಮೇಲ್ಕಂಡ ತೀರ್ಪುಗಳಲ್ಲಿನ ಅವಲೋಕನೆಯ ಹಿನ್ನೆಲೆಯಲ್ಲಿ, ಸರ್ಕಾರವು ಈ ಅಂಶವನ್ನು ಮರುಪರಿಶೀಲಿಸಿದೆ. ಇನ್ನು ಮುಂದೆ ಇಂತಹ ಪ್ರಕರಣಗಳಲ್ಲಿ, ಮೃತ ನೌಕರನ ಕಾನೂನುಬಾಹಿರ ಎರಡನೇ ಅಥವಾ ನಂತರದ ಪತ್ನಿಯಿಂದ ಜನಿಸಿದ ಮಕ್ಕಳನ್ನು ಅನುಕಂಪದ ಆಧಾರದ ನೇಮಕಾತಿಗೆ ಪರಿಗಣಿಸುವಂತೆ ಸೂಚಿಸಲಾಗಿದೆ. ಉಳಿದಂತೆ ಅನುಕಂಪ ಆಧಾರದ ನೇಮಕಾತಿಗೆ ಸಂಬಂಧಿಸಿದಂತೆ ಚಾಲ್ತಿಯಲ್ಲಿರುವ ಎಲ್ಲಾ ನಿಯಮಗಳೂ ಇಂತಹ ಪ್ರಕರಣಗಳಿಗೆ ಅನ್ವಯವಾಗುತ್ತವೆ.

ಮುಂದುವರೆದು ಇದೇ ವಿಷಯಕ್ಕೆ ಸಂಬಂಧಿಸಿದಂತೆ ಈ ಹಿಂದೆ ಹೊರಡಿಸಲಾಗಿದ್ದ ಸರ್ಕಾರದ ಸುತ್ತೋಲೆ ಸಂಖ್ಯೆ: ಸಿಆಸುಇ 131 ಸೇಅನೇ 2015 ದಿನಾಂಕ: 27.08.2015ನ್ನು ತಕ್ಷಣದಿಂದ ಜಾರಿಗೆ ಬರುವಂತೆ ಹಿಂಪಡೆಯಲಾಗಿದೆ.

(ತೇಜಾವತಿ ಎನ್.)
ಸರ್ಕಾರದ ಅಧೀನ ಕಾರ್ಯದರ್ಶಿ
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ
(ಸೇವಾ ನಿಯಮಗಳು-ವಿಶೇಷ ಕೋಶ).

ಮುದ್ರಕರು ಹಾಗೂ ಪ್ರಕಾಶಕರು:– ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು